1. ಒಪ್ಪಿಗೆ ಐತೀರ್ಪು ದರಗಳಿಗೆ ಸರ್ಕಾರವು ದರ ನಿಗಧಿ ಮಾಡುವಲ್ಲಿ ಸಲಹಾ ಸಮಿತಿ ನೇಮಿಸಿದ್ದು, ಸಮಿತಿಯ ಶಿಫಾರಸ್ಸು ಪ್ರಕಾರ ಸರ್ಕಾರವು ದರಗಳನ್ನು ನಿಗಧಿಪಡಿಸಿರುವುದರಿಂದ ಇದರ ಬಗ್ಗೆ ಯಾವುದೇ ಕ್ರಮದ ಅವಶ್ಯಕತೆ ಇರುವುದಿಲ್ಲ.

2. ಸಲಹಾ ಸಮಿತಿಯ ನಿರ್ಣಯದಂತೆ ಬೆಲೆ ನಿಗಧಿಪಡಿಸುವುದರಿಂದ, ಈ ಹಂತದಲ್ಲಿ ಪರಿಷ್ಕರಿಸುವ ಅವಶ್ಯಕತೆ ಇರುವುದಿಲ್ಲ.

ವಿಜಾಪುರ ಜಿಲ್ಲೆಯ ಕೋಲಹಾರ, ನಿಡಗುಂದಿ, ತಾಳಿಕೋಟಿ ಇತ್ಯಾದಿಗಳನ್ನು ತಾಲ್ಲೂಕು ಕೇಂದ್ರಗಳನ್ನಾಗಿ ಮಾಡುವ ಬಗ್ಗೆ

1200(1820) ಶ್ರೀ ಬೆಳ್ಳುಬ್ಬಿ ಸಂಗಪ್ಪ ಕಲ್ಲಪ್ಪ(ಬಸವನ ಬಾಗೇವಾಡಿ) : ಮಾನ್ಯ ಕಂದಾಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ?

ಅ) ವಿಜಾಪುರ ಜಿಲ್ಲೆಯ ಕೋಲಹಾರ, ನಿಡಗುಂದಿ, ತಾಳಿಕೋಟೆ, ಚಡಚಣ, ಕಲಕೇರಿ, ಬಬಲೇಶ್ವರ, ದೇವರಹಿಪ್ಪರಗಿ ಹಾಗೂ ನಾಡಕಛೇರಿ ಇರತಕ್ಕಂತಹ ಎಲ್ಲಾ ಸ್ಥಳಗಳನ್ನು ಹೊಸ ತಾಲ್ಲೂಕುಗಳನ್ನಾಗಿ ಮಾಡಲು ಸರ್ಕಾರ ಕೈಗೊಂಡಿರುವ ಕ್ರಮವೇನು?

ಆ) ತಾಲ್ಲೂಕು ರಚನೆ ಮಾಡದೇ ಇದ್ದಲ್ಲಿ, ಸದರಿ ನಾಡ ಕಛೇರಿಗಳಿಗೆ ವಿಶೇಷ ತಹಸೀಲ್ದಾರ್‌ರುಗಳನ್ನು ನೇಮಿಸುವ ವಿಚಾರ ಸರ್ಕಾರಕ್ಕೆ ಇದೆಯೇ; ಇದ್ದಲ್ಲಿ ಈ ಬಗ್ಗೆ ಕೈಗೊಂಡ ಕ್ರಮಗಳೇನು?

ಶ್ರೀ ಹೆಚ್.ಸಿ. ಶ್ರೀಕಂಠಯ್ಯ(ಕಂದಾಯ ಸಚಿವರು):

ಅ) ಹೊಸ ತಾಲ್ಲೂಕುಗಳನ್ನು ಸೃಜಿಸುವ ಅವಶ್ಯಕತೆ ಬಗ್ಗೆ ಈ ಹಿಂದಿನ 3 ಸಮಿತಿಗಳು ಪರಿಶೀಲಿಸಿರುತ್ತವೆ. ಹೊಸ ತಾಲ್ಲೂಕುಗಳನ್ನು ಸೃಜಿಸುವ ಪ್ರಸ್ತಾವನೆ ಸದ್ಯಕ್ಕೆ ಸರ್ಕಾರದ ಪರಿಶೀಲನೆಯಲ್ಲಿರುವುದಿಲ್ಲ. ಆದರೆ ಆಡಳಿತದಲ್ಲಿ ದಕ್ಷತೆಯನ್ನು ವೃದ್ಧಿಸುವ ದೃಷ್ಟಿಯಿಂದ ಬಿಜಾಪುರ ಜಿಲ್ಲೆಯ ನಿಡಗುಂದಿ, ತಾಳಿಕೋಟೆ, ಬಬಲೇಶ್ವರಗಳಿಗೆ ಒಂದೊಂದು ವಿಶೇಷ ತಹಸೀಲ್ದಾರರನ್ನು ನೇಮಿಸಲಾಗಿದೆ. ಅಲ್ಲದೆ, ಜಡಚಣಕ್ಕೆ ವಿಶೇಷ ತಹಸೀಲ್ದಾರರನ್ನು ನೇಮಿಸುವ ವಿಷಯ ಸರ್ಕಾರದ ಪರಿಶೀಲನೆಯಲ್ಲಿದೆ. ಕೊಲಹಾರ, ಕಲಕೇರಿಹಾಗೂ ದೇವರ ಹಿಪ್ಪರಗಿ ಹಾಗೂ ನಾಡಕಛೇರಿ ಇರತಕ್ಕಂತಹ ಎಲ್ಲಾ ಸ್ಥಳಗಳನ್ನು ಹೊಸ ತಾಲ್ಲೂಕುಗಳನ್ನಾಗಿ ಸೃಜಿಸುವ ಪ್ರಸ್ತಾವನೆ ಸರ್ಕಾರದ ಪರಿಶೀಲನೆಯಲ್ಲಿರುವುದಿಲ್ಲ.

ಆ) ನಾಡಕಛೇರಿಗಳಿಗೆ ವಿಶೇಷ ತಹಸೀಲ್ದಾರರನ್ನು ನೇಮಿಸುವ ವಿಷಯ ಸರ್ಕಾರದ ಪರಿಶೀಲನೆಯಲ್ಲಿ ಇರುವುದಿಲ್ಲ.

ಬಿಜಾಪುರ ಜಿಲ್ಲೆಗೆ ಬರಪರಿಹಾರಕ್ಕಾಗಿ ಕೇಂದ್ರದಿಂದ ಬಿಡುಗಡೆಯಾದ ಹಣ ಮತ್ತು ಆಹಾರ ಧಾನ್ಯಗಳು

1201(1821) ಶ್ರೀ ಬೆಳ್ಳುಬ್ಬಿ ಸಂಗಪ್ಪ ಕಲ್ಲಪ್ಪ(ಬಸವನಬಾಗೇವಾಡಿ) : ಮಾನ್ಯ ಕಂದಾಯ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ?

ಅ) ಬರ ಪರಿಹಾರಕ್ಕಾಗಿ ಕೇಂದ್ರ ಸರ್ಕಾರದಿಂದ ರಾಜ್ಯಕ್ಕೆ ಬಿಡುಗಡೆಯಾದ ಹಣ ಮತ್ತು ಆಹಾರಧಾನ್ಯಗಳು ಎಷ್ಟು?

ಆ) ಇದರಲ್ಲಿ ರಾಜ್ಯ ಸರ್ಕಾರ ಎಷ್ಟು ಎತ್ತುವಳಿ ಮಾಡಿದೆ?